ಕರ್ನಾಟಕ ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ನಿಗಮವನ್ನು ಮುಚ್ಚಲು ಸಿ.ಎ.ಜಿ ಶಿಫಾರಸ್ಸು ಮಾಡಿರುವ ಬಗ್ಗೆ

39(129):- ಶ್ರೀ ಯೋಗೀಶ್ ಭಟ್ ಎನ್ (ಮಂಗಳೂರು):- ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ಕರ್ನಾಟಕ ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ನಿಗಮವನ್ನು ಮುಚ್ಚುವಂತೆ ಸಿ.ಎ.ಜಿ. ಶಿಫಾರಸ್ಸು ಮಾಡಿರುವುದು ನಿಜವೇ: ಶಿಫಾರಸ್ಸು ಮಾಡಲು ಕಾರಣವೇನು?

ಆ. ಈ ನಿಗಮದ ಕಳೆದ 3 ವರ್ಷದ ಲಾಭನಷ್ಟ ವಿವರಗಳನ್ನು ಒದಗಿಸುವುದು;

ಇ. ರಾಜ್ಯದಲ್ಲಿ ಸಣ್ಣ ಕೈಗಾರಿಕಾ ಘಟಕಗಳು ಎಷ್ಟು ಇವೇ ಇವುಗಳಲ್ಲಿ ಎಷ್ಟು ಘಟಕಗಳು ನಿಗಮದಲ್ಲಿ ನೊಂದಣಿ ಮಾಡಿಸಿವೆ (ಜಿಲ್ಲಾವಾರು ವಿವರ ನೀಡುವುದು)

ಈ. ಈ ಘಟಕಗಳು ನೊಂದಣಿ ಮಾಡದೇ ಇರಲು ಕಾರಣಗಳೇನು? ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಉ. ಸಿ.ಎ.ಜಿ. ವರದಿಯಾಧಾರದ ಮೇಲೆ ಸರ್ಕಾರ ಇದುವರೆವಿಗೂ ಕೈಗೊಂಡಿರುವ ಕ್ರಮವೇನು?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಕೈಗಾರಿಕಾ ಸಚಿವರು)

ಅ. ಹೌದು, ಮಹಾಲೇಖಪಾಲರು, (ಆಡಿಟ್) ಅವರು ಕೆಲವೊಂದು ಶಾಖೆಗಳ 5 ವರ್ಷಗಳ ಅವಧಿಯ ವಹಿವಾಟನ್ನು ವಿಶೇಷ ಲೆಕ್ಕ ಪರಿಶೋಧನೆಯಾಗಿ ಪರಿಗಣಿಸಿ ಪರಿಶೀಲಿಸಲಾಗಿ ಕಂಡು ಬಂದಂತಹ ನ್ಯೂನತೆಗಳನ್ನು ಆಧರಿಸಿ ಹಾಗೂ ನಿಗಮದ ಒಟ್ಟು ವ್ಯವಹಾರವನ್ನು ಪರಿಶೀಲಿಸಿ ಇಲ್ಲಿಯ ಹಣದ ದುರುಪಯೋಗದ ನ್ಯೂನತೆಗಳ ಬಗ್ಗೆ ಕಾರಣಗಳನ್ನು ವಿವರಿಸಿ ನಿಗಮವು ತನ್ನ ಸ್ಥಾಪಿತ ಉದ್ದೇಶವನ್ನು ಈಡೇರಿಸುವಲ್ಲಿ ವಿಫಲವಾಗಿದೆ ಎಂಬ ಕಾರಣಗಳಿಂದ ನಿಗಮವನ್ನು ಮುಚ್ಚಲು ಶಿಫಾರಸ್ಸು ಮಾಡಿದೆ.

ಆ.

	ತೆರಿಗೆ ಮುನ್ನ	ತೆರಿಗೆ ನಂತರ ಲಾಭ
1999-2000	142.00	86.94
2000-2001	82.32	ಲೆಕ್ಕ ಪರಿಶೋಧನೆಯಲ್ಲಿದೆ
2001-02	55.34	ಲೆಕ್ಕ ಪರಿಶೋಧನೆಯಲ್ಲಿದೆ
	(ತಾತ್ಕಾಲಿಕ)	(ನಷ್ಟ)

ಇ. 1. ಮಾರ್ಚ್ 2002 ರವರೆಗೆ ಒಟ್ಟು 2,86,189 ಎಸ್.ಎಸ್.ಐ ಘಟಕಗಳು ನೋಂದಾಯಿತವಾಗಿವೆ.

2. ನಿಗಮದಲ್ಲಿ 3.3.2001ರ ಅಂತ್ಯಕ್ಕೆ 5138 ಘಟಕಗಳು ನೊಂದಣಿ ಆಗಿದೆ. ತರುವಾಯ ನೊಂದಣಿಗಳು ಇರುವುದಿಲ್ಲ. (ವಿವರಗಳು ಅನುಬಂಧ-1ರಲ್ಲಿ ಲಗತ್ತಿಸಿದೆ)

ಈ. ಘಟಕಗಳು ನಮ್ಮಲ್ಲಿ ದರ ಒಪ್ಪಂದ ಕರಾರು ಯೋಜನೆ ಹಾಗೂ ಮಾರುಕಟ್ಟೆ ಸಹಾಯ ಯೋಜನೆಯಡಿಯಲ್ಲಿ ವ್ಯವಹರಿಸಲು ಆಸಕ್ತಿ ಇರುವವರನ್ನು ಮಾತ್ರ ನೊಂದಣಿ ಮಾಡಿರುತ್ತಾರೆ.

ಸದಸ್ಯದಲ್ಲಿ ನಿಗಮವನ್ನು ಮುಚ್ಚಲು ಆದೇಶವಿರುವುದರಿಂದ ಹೆಚ್ಚುವರಿ ನೊಂದಣಿ ಮಾಡಲು ಯಾವ ಕ್ರಮವನ್ನು ಕೈಗೊಂಡಿರುವುದಿಲ್ಲ.

ಸಿ.ಎ.ಜಿ. ವರದಿ ಆಧಾರದ ಮೇಲೆ ಈಗಾಗಲೇ ಇಲಾಖಾ ವಿಚಾರಣೆಯನ್ನು ನಿವೃತ್ತ ನ್ಯಾಯಾಧೀಶರಿಂದ ನಡೆಸುತ್ತಿದ್ದು, 8 ವರದಿಗಳು ಬಂದಿದ್ದು, ವರದಿಗಳು ಪರಿಶೀಲನೆಯಲ್ಲಿದ್ದು, ತಪ್ಪಿತಸ್ಥ ಸಿಬ್ಬಂದಿಯವರ ಮೇಲೆ ಶಿಸ್ತಿನ ಕ್ರಮವನ್ನು ಜರುಗಿಸಲಾಗುವುದು.

ಶ್ರೀ ಎನ್ ಯೋಗೀಶ್ ಭಟ್ ರವರ ವಿಧಾನಸಭೆ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 129 ಕ್ಕೆ

ಅನುಬಂಧ-1

ನಿಗಮದಲ್ಲಿ ನೊಂದಾಯಿತವಾಗಿರುವ ಜಿಲ್ಲಾವಾರು ಸಣ್ಣ ಪ್ರಮಾಣದ ಕೈಗಾರಿಕೆಗಳ ಪಟ್ಟಿ 31.3.2001ರ ಅಂತ್ಯಕ್ಕೆ

1.	ಬೆಂಗಳೂರು	1952
2.	ಬಾಗಲಕೋಟೆ	89
3.	ಬೆಳಗಾಂ	259
4.	ಬಳ್ಳಾರಿ	98
5.	ಬೀದರ್	78
6.	ಬಿಜಾಪುರ್	140
7.	ಚಾಮರಾಜನಗರ	49
8.	ಚಿಕ್ಕಮಗಳೂರು	90
9.	ಚಿತ್ರದುರ್ಗ	88
10.	ದಾವಣಗೆರೆ	112
11.	ಧಾರವಾಡ	46
12.	ಗದಗ್	68
13.	ಗುಲ್ಬರ್ಗಾ	313
14.	ಹಾಸನ	11

15.	ಹಾವೇರಿ	62
16.	ಕಾರವಾರ	60
17.	ಕೊಡಗು	84
18.	ಕೋಲಾರ	130
19.	ಮಂಡ್ಯ	96
20.	ಮಂಗಳೂರು	77
21.	ಮೈಸೂರು	163
22.	ರಾಯಚೂರು	17
23.	ಶಿವಮೊಗ್ಗ	10
24.	ತುಮಕೂರು	230
25.	ಉಡುಪಿ	27
26.	ಕೊಪ್ಪಳ	09
		51-38

ಶ್ರೀ ಎನ್. ಯೋಗೀಶ್‌ಭಟ್:- ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ನಿಗಮದ ಅಧಿಕಾರಿಗಳು, ಸರ್ಕಾರದ ವಿವಿಧ ಇಲಾಖೆಗಳು, ಸಣ್ಣ ಕೈಗಾರಿಕೆಯ ಕೆಲವು ಘಟಕಗಳು, ಎಲ್ಲವು ಸೇರಿ ದೊಡ್ಡ ಅವ್ಯವಹಾರ ಭ್ರಷ್ಟಾಚಾರವಾಗಿ ಕೋಟ್ಯಾಂತರ ರೂಪಾಯಿಗಳು ನಷ್ಟವಾಗಿದೆ. ಇದರಲ್ಲಿ ಮಾರ್ಕೆಂಟಿಂಗ್ ಅಸಿಸ್ಟೆನ್ಸ್ ಸ್ಕೀಂನಲ್ಲಿ ಸಹ ಸಾಕಷ್ಟು ನಷ್ಟವಾಗಿದೆ. ಇದರ ಫಲಶ್ರುತಿಯಾಗಿ ಸಿಎಜಿಯವರು ಈ ಘಟಕವನ್ನು ಮುಚ್ಚಬೇಕೆಂದು ಆಜ್ಞೆ ಹೊರಡಿಸಿರುವ ಹಿನ್ನೆಲೆಯಲ್ಲಿ ಸರ್ಕಾರದ ಸ್ಪಷ್ಟ ನಿಲುವೇನು? ಇದಕ್ಕೆ ಸಂಬಂಧಿಸಿದ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಭ್ರಷ್ಟಾಚಾರದಿಂದ ಆಗಿರುವ ನಷ್ಟವನ್ನು ಭರಿಸಲು ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಆರ್. ರೋಷನ್ ಬೇಗ್:- ಈ ನಿಗಮವನ್ನು ಮುಚ್ಚಬೇಕೆಂದು ಕ್ಯಾಬಿನೆಟ್ ಡಿಸಿಷನ್ ಆಗಿದೆ. ಸಿಎಜಿಯವರು ಇದರಲ್ಲಿ ಅವ್ಯವಹಾರವಾಗಿದೆ. ಮಿಸ್-ಅಪ್ರೋಪ್ರಿಯೇಷನ್ ಆಫ್ ಫಂಡ್ಸ್ ಆಗಿದೆ ಎಂದು ಅವರು ಐದು ಬ್ರಾಂಚ್‌ಗಳನ್ನು ಇನ್ಸ್‌ಪೆಕ್ಟ್ ಮಾಡಿ ಅವ್ಯವಹಾರವಾಗಿದೆ ಎಂದು ವರದಿ ಕೊಟ್ಟಿದ್ದಾರೆ. ಆ ವರದಿಯಾಧಾರದ ಮೇಲೆ ಚೀಫ್ ಜನರಲ್ ಮ್ಯಾನೇಜರ್ ಹಾಗೂ ಇಬ್ಬರು ಜನರಲ್ ಮ್ಯಾನೇಜರ್ ಇವರುಗಳನ್ನು ನಾವು ಸಸ್ಪೆಂಡ್ ಮಾಡಿದ್ದೇವೆ. ಡಿಸ್ಟ್ರಿಕ್ಟ್ ಜಡ್ಜ್‌ರವರು ಇದರ ಬಗ್ಗೆ ತನಿಖೆ ಮಾಡುತ್ತಿದ್ದಾರೆ. ಕೆಲವು ಅಧಿಕಾರಿಗಳಿಗೆ ಷೋ-ಕಾಸ್ ನೋಟೀಸ್ ಕೊಟ್ಟಿದ್ದೇವೆ. ಅಲ್ಲಿ ಅವ್ಯವಹಾರ ನಡೆದಿದ್ದು ನಿಜ.ಇದನ್ನು ಯಾವ ಪರ್ಪಸ್‌ಗೆ ರಚಿಸಲಾಗಿತ್ತೋ, ಆ ಪರ್ಪಸ್ ಸರ್ವ್ ಆಗುತ್ತಿಲ್ಲ. ಕ್ಯಾಬಿನೆಟ್ ಡಿಸಿಷನ್ ತೆಗೆದುಕೊಂಡು ಇದನ್ನು ಕ್ಲೋಸ್ ಮಾಡಬೇಕೆಂದು ಸರ್ಕಾರ ತೀರ್ಮಾನಿಸಿದೆ. ಬಹಳ ಜನರು

ಅದು ಇದಿದ್ದರೆ ಚೆನ್ನಾಗಿತ್ತೆಂದು ಹೇಳುತ್ತಿದ್ದಾರೆ. ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮತಿಯಿಂದ ಇದನ್ನು ಮಾಡಬೇಕೆಂದು ತೀರ್ಮಾನಿಸಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್:- ಕೆಲವೊಂದು ಅಧಿಕಾರಿಗಳು ಅವ್ಯವಹಾರ ಮಾಡಿದ್ದಾರೆ. ಭ್ರಷ್ಟಾಚಾರ ನಡೆದಿದೆ ಎನ್ನುವ ಉದ್ದೇಶದಿಂದ ಸಿಎಜಿ ವರದಿ ಕೊಟ್ಟಿದೆ. ಈ ನಿಗಮವನ್ನು ಮುಚ್ಚಲು ನಿರ್ಣಯವಾಗಿದೆ ಎಂದು ಹೇಳಿದಿರಿ. ಈ ನಿಗಮದ ಮೇಲೆ ಐದು ಸಾವಿರ ಸಣ್ಣ ಕೈಗಾರಿಕೆಗಳು ಬದುಕಿವೆ. ಕೆಲವೊಂದು ಅಧಿಕಾರಿಗಳು ಭ್ರಷ್ಟಾಚಾರ ಮಾಡಿದ್ದಾರೆಂದು ಹೇಳಿ ಇಡೀ ನಿಗಮವನ್ನು ಮುಚ್ಚಲು ಹೊರಟರೆ ಅದರಿಂದ ಒಳ್ಳೆಯದಾಗುವುದಿಲ್ಲ. ನೆಗಡಿಯಾದರೆ ಮೂಗನ್ನೇ ಕೊಯ್ಯಲು ಹೊರಟಂತಹ ಕೆಲಸವನ್ನು ಮಾಡುತ್ತಿದ್ದೀರಿ. ಇದರ ಬಗ್ಗೆ ಪರ್ಯಾಯವಾದ ವ್ಯವಸ್ಥೆ ಇದೆ. 1994-95ನೇ ಸಾಲಿನಿಂದ ಕಳೆದ ವರ್ಷದವರೆಗೂ ಇದು ಲಾಭದಲ್ಲಿ. ಪ್ರತಿವರ್ಷವೂ ಲಾಭದಲ್ಲಿದೆ. ಕೆಲವೊಂದು ಅಧಿಕಾರಿಗಳ ಭ್ರಷ್ಟಾಚಾರದಿಂದ ಇಡೀ ನಿಗಮವನ್ನು ಮುಚ್ಚಲು ಹೊರಟಿರುವುದು ಎಷ್ಟು ಸರಿ? ಇದನ್ನು ಮುಚ್ಚುವುದಾದರೆ ನೀವು ಅದಕ್ಕಿಂತ ಮೊದಲು ಪರ್ಯಾಯವಾದ ವ್ಯವಸ್ಥೆ ಏನಾದರೂ ಮಾಡಿದ್ದೀರಾ? ಇದರ ಬಗ್ಗೆ ಉತ್ತರಿಸಿ. ಇದರ ಮೇಲೇನು 5 ಸಾವಿರ ಸಣ್ಣ ಕೈಗಾರಿಕೆಗಳು ಅವಲಂಬಿಸಿಕೊಂಡು ಬದುಕಿವೆ. ಅವೂ ಕೂಡ ಮುಚ್ಚಿ ಹೋಗುತ್ತವೆ. ಇದರ ಬಗ್ಗೆ ಈಗಾಗಲೇ ನಾನು ಮಾತನಾಡಿದ್ದೇನೆ. ಇವು ಮತ್ತು ಇನ್ನುಳಿದ ಕೈಗಾರಿಗಳು ಮುಚ್ಚುತ್ತವೆ. ಅದರ ಬಗ್ಗೆ ತಾವು ಗಂಭೀರವಾಗಿ ತೆಗೆದುಕೊಳ್ಳಬೇಕು.

ಶ್ರೀ ಆರ್. ರೋಷನ್ ಬೇಗ್:- ಮಾನ್ಯ ವಿರೋಧ ಪಕ್ಷದ ನಾಯಕರು, ಇದನ್ನು ಮುಚ್ಚಬೇಡಿ, ಐದು ಸಾವಿರ ಸಣ್ಣ ಕೈಗಾರಿಗಳಿಗೆ ಸಹಾಯವಾಗುತ್ತದೆಂಬ ಸಲಹೆ ಕೊಟ್ಟಿದ್ದಾರೆ. ಅದನ್ನು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಡೆಲಪ್‌ಮೆಂಟ್ ಕಾರ್ಪೊರೇಷನ್ ಮೂಲಕ ಮಾಡಬೇಕೆಂದಿದ್ದೆವು. ಅವರ ಸಲಹೆ ಪಡೆದು, ಏಕೆ ಇದನ್ನು ರಿವೈವ್ ಮಾಡಬಾರದೆಂಬ ಬಗ್ಗೆ ನಾನು ಯೋಚಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:- ಅಲ್ಲಿ ಅಧಿಕಾರಿಗಳು ಏನು ಭ್ರಷ್ಟಾಚಾರ ಮಾಡಿದ್ದಾರೆ ಅವರ ಮೇಲೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಮೊದಲು ಅವರನ್ನು ಸೇವೆಯಿಂದ ತೆಗೆಯುವ ಕೆಲಸವಾಗಬೇಕು.

ಶ್ರೀ ಆರ್. ರೋಷನ್ ಬೇಗ್:- ಇದರಲ್ಲಿ ಯಾವ್ಯಾವ ಆಫೀಸರ್ಸ್ ಇನ್‌ವಾಲ್ವ್ ಆಗಿದ್ದಾರೆ. ಟಾಪ್-ಟು-ಬಾಟಂ, ಅವರು ಸಿಜಿಎಂ, ಜಿಎಂ ಆಗಲಿ, ಯಾರೇ ಆಗಿರಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳಲು ಇದನ್ನು ಸಿಒಡಿಗೆ ರೆಫರ್ ಮಾಡುತ್ತೇನೆ.

ಶ್ರೀ ಎ. ರಾಮದಾಸ್:- ರಾಜ್ಯದಲ್ಲಿ ಮಾರ್ಕೆಂಟಿಂಗ್ ಅಶ್ಯೂರೆನ್ಸ್ ಇಲ್ಲವೆನ್ನುವ ವಿಚಾರದಲ್ಲಿ ಬಹುತೇಕ ಕಾರ್ಖಾನೆಗಳು ಮುಚ್ಚುತ್ತಿವೆ. ಇಲ್ಲಿ ಕೆಎಸ್‌ಎಂಸಿ ಏನಿದೆ ಅದಕ್ಕೆ ಸಂಬಂಧಪಟ್ಟ ಅವ್ಯವಹಾರಗಳು ಬಹಳ ವರ್ಷಗಳಿಂದ ಇದೆ. ರೇಟ್ ಕಾಂಟ್ರಾಕ್ಟ್ ಡಿಪಾರ್ಟ್‌ಮೆಂಟ್ ಇತ್ತು. ಅದನ್ನು ಮುಚ್ಚುವ ನಿರ್ಧಾರ ಮಾಡಿದಿರಿ. ಎರಡೂ ಇಲಾಖೆಗಳನ್ನು ಮುಚ್ಚಿದ ನಂತರ, ಮಾರ್ಕೆಂಟಿಂಗ್ ಅಶ್ಯೂರೆನ್ಸ್‌ಗೆ ಯಾವ ಪ್ರೋಗ್ರಾಂ ಇಟ್ಟುಕೊಂಡಿದ್ದೀರಿ ಎಂಬುದನ್ನು ಹೇಳಿ.

ಶ್ರೀ ಆರ್. ರೋಷನ್ ಬೇಗ್:- ರೇಟ್ ಕಾಂಟ್ರಾಕ್ಟ್‌ಗೆ ಒಂದು ಕಡೆ ಟ್ರಾನ್ಸ್‌ಫರೆನ್ಸಿ ಆಕ್ಟ್ ಇತ್ತು. ಆ ಆಕ್ಟ್‌ನಿಂದ ಕೆಲವರಿಗೆ ತೊಂದರೆಯಾಗುತ್ತಿತ್ತು. ಮಾರ್ಕೆಂಟಿಂಗ್‌ಗೆ ಈ ಒಂದು ಸಂಸ್ಥೆ ಇತ್ತು. ಅದರಿಂದ ಈಗ ಅದನ್ನು ಮುಚ್ಚಿದ್ದೇವೆ. ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್‌ನಲ್ಲಿ ಮಲ್ಟಿಪ್ಲಿಸಿಟಿ ಆಗಬಾರದೆಂದು ಅಶ್ಯೂರೆನ್ಸ್ ಸಂಸ್ಥೆಯಾಗಬೇಕೆಂದು, ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಏನಿದೆ ಆ ಮೂಲಕ ಮಾರ್ಕೆಟಿಂಗ್ ಅನಿಸ್ಸೆನ್ಸ್ ಮಾಡಬೇಕೆಂದು ತೀರ್ಮಾನಿಸಿದ್ದೇವೆ.

ಶ್ರೀ ಎನ್. ಯೋಗೀಶ್ ಭಟ್:- ರಾಜ್ಯದಲ್ಲಿ 2 ಲಕ್ಷದ 40 ಸಾವಿರ ಸಣ್ಣ ಕೈಗಾರಿಕಾ ಘಟಕಗಳಿವೆ.ಅದರಲ್ಲಿ 60 ಪರ್ಸೆಂಟ್ ಘಟಕಗಳು ಮುಚ್ಚುವ ಸ್ಥಿತಿಯಲ್ಲಿವೆ. ಯಾವ ಒಂದು ಚಕ್ರವ್ಯೂಹದಲ್ಲಿ ಅವರು ಸಿಕ್ಕಿಹಾಕಿಕೊಂಡಿದ್ದಾರೆಂದರೆ, ಒಂದು ಕಡೆ 40 ಇಲಾಖೆಗಳಿಂದ ಕ್ಲಿಯರೆನ್ಸ್ ಆಗಬೇಕು. ಸರ್ಕಾರವೇ ಏನಾದರೂ ಮಾಡಿ ಎಗ್ಜಿಟ್ ಪಾಲಿಸಿಯನ್ನು ಡಿಕ್ಲೇರ್ ಮಾಡಬೇಕೆಂದು ಕಳೆದ ಹಲವಾರು ವರ್ಷಗಳಿಂದ ನಾವು ಒತ್ತಾಯಿಸುತ್ತಿದ್ದೇವೆ. ಆ ಪಾಲಿಸಿಯನ್ನು ತಾವೇನಾದರೂ ಘೋಷಣೆ ಮಾಡುತ್ತೀರಾ? ಸರಳವಾಗಿ ಟ್ರಾನ್ಸ್‌ಫರ್ ಮಾಡಲಿಕ್ಕೆ, ಸೇಲ್ ಮಾಡಲಿಕ್ಕೆ ಅನುಕೂಲವಾಗುವ ರೀತಿಯಲ್ಲಿ ಏನಾದರೂ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಆರ್. ರೋಷನ್ ಬೇಗ್:- ಅವರು ಹೇಳಿರುವ ಪ್ರಶ್ನೆ ಬಗ್ಗೆ ಹೇಳಬೇಕೆಂದರೆ, ಡೆಲ್ಲಿಯಲ್ಲಿ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಬೋರ್ಡ್ ಮೀಟಿಂಗ್ ಆಯಿತು. ಶ್ರೀಮತಿ ವಸುಂಧರೆ ರಾಜೇಸಿಂಧ್ಯಾರವರು ಅದರ ಬಗ್ಗೆ ನಮ್ಮ ಜೊತೆ ಚರ್ಚಿಸಿದ್ದಾರೆ. ನಾವು ಆ ಕೂಡಲೇ ಒಂದು ಪಾಲಿಸಿ ಮಾಡುತ್ತಿದ್ದೇವೆ.

ಕರ್ನಾಟಕ ರಾಜ್ಯಕ್ಕೆ ಹೊರರಾಜ್ಯಗಳಿಂದ ಬರುತ್ತಿರುವ ಹಾಲಿನ ಮಾರಾಟವನ್ನು ನಿಲ್ಲಿಸುವ ಬಗ್ಗೆ

40(142):- ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ):- ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ಕರ್ನಾಟಕ ರಾಜ್ಯಕ್ಕೆ ಹೊರ ರಾಜ್ಯಗಳಿಂದ ಪ್ರತಿದಿನ ಬರುತ್ತಿರುವ ಹಾಲಿನ ಪ್ರಮಾಣವೆಷ್ಟು? ಇದರಲ್ಲಿ ಬೆಂಗಳೂರು ನಗರಕ್ಕೆ ಬರುತ್ತಿರುವ ಪ್ರಮಾಣವೆಷ್ಟು?

ಆ. ಈ ಹಾಲಿನ ಗುಣಮಟ್ಟ ಸೇವನಾ ಯೋಗ್ಯವೇ ಎಂದು ಪರೀಕ್ಷಿಸಲಾಗಿದೆಯೇ?

ಇ. ಅರೋಗ್ಯಕ್ಕೆ ಮಾರಕವಾಗಿದ್ದರೂ ಹೊರ ಭಾಗದ ಕೆಲವು ಖಾಸಗಿ ಸಂಸ್ಥೆಗಳಿಂದ ಹಾಲಿನ ಮಾರಾಟವನ್ನು ನಿಲ್ಲಿಸಲು ಸರ್ಕಾರ ಕ್ರಮಕೈಗೊಳ್ಳದಿರಲು ಕಾರಣಗಳೇನು?

ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ. ಕರ್ನಾಟಕ ಹಾಲು ಮಹಾ ಮಂಡಳಿಯವರ ಅಂದಾಜುಗಳ ಪ್ರಕಾರ ಪ್ರತಿದಿನ ಕರ್ನಾಟಕ ರಾಜ್ಯದೊಳಕ್ಕೆ ಸುಮಾರು 5.00 ಲಕ್ಷ ಲೀಟರ್ ಹಾಲು ಬರುತ್ತಿದೆ. ಇದರ ಪೈಕಿ ಸುಮಾರು 1.40 ಲಕ್ಷ ಲೀಟರ್ ಹಾಲು ಬೆಂಗಳೂರು ನಗರಕ್ಕೆ ಬರುತ್ತಿದೆ.